ದಿನಾಂಕ:09-03-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-**

ನಾನು ಚಿಕಿತ್ಸೆ ಪಡೆದ ಬಗ್ಗೆ ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸುತ್ತೇನೆ ಎಂದು ಹೇಳಿದ್ದು ಆದರೆ ಅವು ಎಷ್ಟು ಹುಡುಕಿದರು ಸಿಗಲಿಲ್ಲ. ನನ್ನ ತಾಯಿ ಕೈಗೆ ಕೊಟ್ಟಿದ್ದೆ ಅವು ಅವರ ಕೈಯಲ್ಲಿ ಕಳೆದುಹೋಗಿವೆ, ಆದ್ದರಿಂದ ನ್ಯಾಯಾಲಯಕ್ಕೆ ನೀಡಲು ಆಗಲಿಲ್ಲ. ವೈನ್ಸ ಶಾಪ್ ಗೆ ಪೆಟ್ರೋಲ್ ಬಾಂಬ್ ಎಸೆದವರನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ. ನೋಡಿದರೆ ಗುರುತಿಸಬಲ್ಲೆ ಎಂದು ನಾನು ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :-**

ದಿನಾಂಕ:03-12-2020 ರಂದು ನಾನು ಕೊಡಿಗೇನಹಳ್ಳಿ ಪೊಲೀಸರ ಮುಂದೆ ಒಂದು ಹೇಳಿಕೆ ನೀಡಿ ಅದರಲ್ಲಿ ನಂದಿನಿ ವೈನ್ಸ್ ಶಾಪ್ ಮೇಲೆ ಪೆಟ್ರೋಲ್ ಬಾಂಬ್ ಎಸೆದವರನ್ನು ನೋಡಿದ್ದೇನೆ, ಅವರನ್ನು ಮತ್ತೆ ನೋಡಿದರೆ ಗುರುತಿಸಬಲ್ಲೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 2 ರಿಂದ 4 ನಮ್ಮ ವೈನ್ಸ ಶಾಪ್ ಮಾಲೀಕರಿಂದ ಹಣಕ್ಕೆ ಬೇಡಿಕೆ ಇಟ್ಟಿದ್ದು ಅದನ್ನು ಕೊಡದೆ ಇದ್ದಾಗ 1ನೇ ಆರೋಪಿ ಆರೋಪಿ 2 ರಿಂದ 4 ರವರ ಸಹಾಯದಿಂದ ವೈನ್ಸ ಶಾಪ್ ಮೇಲೆ ಪೆಟ್ರೋಲ್ ಬಾಂಬ್ ಎಸೆದಿದ್ದ ಎಂಬ ವಿಚಾರ ನನಗೆ ಮತ್ತೆ ಗೊತ್ತಾಯಿತು ಎಂದರೆ ಸರಿಯಲ್ಲ. ಆ ರೀತಿ ಪೆಟ್ರೋಲ್ ಬಾಂಬ್ ಎಸೆದವರು 2 ರಿಂದ 4ನೇ ಆರೋಪಿಳೇ ಎಂದು ನಾನು ಪೊಲೀಸರ ಮುಂದೆ ಹೇಳಿದ್ದೇನೆ ಎಂದರೆ ಗೊತ್ತಿಲ್ಲ. ವೈನ್ಸ ಶಾಪ್ ಬೆಂಕಿಯಿಂದ ಸುಟ್ಟು ಹೋಗಿ 20 ಸಾವಿರ ನಷ್ಟ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ವಿವರವಾದ ಮರು ಹೇಳಿಕೆ ನೀಡಿದ್ದೇನೆ ಎಂದರೆ ಗೊತ್ತಿಲ್ಲ. ಪೆಟ್ರೋಲ್ ಬಾಂಬ್ ಎಸೆದವರು ಯಾರು ಎಂದು ನನಗೆ ಗೊತ್ತಿದ್ದರೂ ಅವರಿಗೆ ಹೆದರಿ

ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಳಿ ರೂ.9,90,000/- ಕ್ಕೆ ಚಿಕಿತ್ಸೆ ಪಡೆದ ಬಗ್ಗೆ ಬಿಲ್ಲು ಇದೆ ಇದ್ದರೂ ಕಳೆದುಹೋಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ದಿನಾಂಕಃ03-12-2020 ರ ಮರು ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

**ಪಾಟೀಸವಾಲು ಶ್ರೀ.LRR ವಕೀಲರಿಂದ 1 ನೇ ಆರೋಪಿ ಪರವಾಗಿಃ-**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು SSLC ಓದಿದ್ದೇನೆ. ನಾನು ಕನ್ನಡ ಮಾಧ್ಯಮದಲ್ಲಿ SSLC ಯನ್ನು ಓದಿದ್ದೇನೆ. ನಾನು ವೈನ್ಸ ಶಾಪ್ ನಲ್ಲಿ 5 ವರ್ಷ ಕೆಲಸ ಮಾಡಿದ್ದೇನೆ. ನಮ್ಮ ವೈನ್ಸ ಶಾಪ್ ಮಾಲೀಕರು ನಮ್ಮಲ್ಲಿ ಆತ್ಮಿಯತೆಯಿಂದ ಇದ್ದರು ಎಂದರೆ ಸರಿ. ನಾನು ಬೆಳಿಗ್ಗೆ 09ಃ00 ಗಂಟೆಗೆ ವೈನ್ಸ ಶಾಪ್ ಗೆ ಹೋದರೆ ರಾತ್ರಿ 10ಃ00 ಗಂಟೆಗೆ ಬರುತ್ತಿದ್ದೆ. ನಾನು ಅಲ್ಲಿ ಹೆಲ್ಪರ್ ಆಗಿ ಕೆಲಸ ಮಾಡುತ್ತಿದ್ದೆ. ನಮ್ಮ ವೈನ್ಸ ಶಾಪ್ ನಲ್ಲಿ ಹಾಜರಾತಿ ಪುಸ್ತಕ ಇತ್ತೊ ಇಲ್ಲವೊ ಗೊತ್ತಿಲ್ಲ. ನಮ್ಮ ವೈನ್ಸ ಶಾಪ್ ಗೆ ತುಂಬಾ ಜನ ಗ್ರಾಹಕರು ಬರುತ್ತಾ ಹೋಗುತ್ತಾ ಇದ್ದಾರೆ ಎಂದರೆ ಸರಿ. ಗ್ರಾಹಕರು ಹೆಚ್ಚಾಗಿ ಬಂದಾಗ ಕುಡಿದ ಮತ್ತಿನಲ್ಲಿ ಅವರೊಳಗೆ ಗಲಾಟೆಗಳು ಆಗುತ್ತಿದ್ದವು ಎಂದರೆ ಸರಿ. ನಮ್ಮ ಮಾಲೀಕರ ವಿರುದ್ದ ಬೇರೆಯವರಿಗೆ ತುಂಬಾ ಮನಸ್ತಾಪಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ವೈನ್ಸ ಶಾಪ್ ಗೆ ಪ್ರತಿ ನಿತ್ಯ ಯಾರು ಬರುತ್ತಾರೆ ಹೋಗುತ್ತಾರೆ ಎಂಬುವುದನ್ನು ಎಲ್ಲಾ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ವೈನ್ಸ ಶಾಪ್ ನಲ್ಲಿ ಕೆಲಸ ಮಾಡುವಾಗ ನಾನು ತುಂಬಾ ಒತ್ತಡದಲ್ಲಿ ಇರುತ್ತೇನೆ ಎಂದರೆ ಸರಿ. ಯಾವ ಯಾವ ದಿನಾಂಕ ಯಾರು ಯಾರು ಬರುತ್ತಾರೆ, ಹೋಗುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಅದೇ ರೀತಿ ಅವರನ್ನು ನನಗೆ ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ಕಳೆದ ಬಾರಿ ಮುಖ್ಯ ವಿಚಾರಣೆಯಲ್ಲಿ ಏನೇನು ಹೇಳಿದ್ದೇನೆ ಎಂದು ಈಗ ನೆನಪು ಇಲ್ಲ. ಘಟನೆ ನಡೆದ ದಿನಾಂಕ ಸಮಯ ಹೇಳಲು ಈಗ ಆಗುವುದಿಲ್ಲ. ಆ ದಿನ ನಮ್ಮ ವೈನ್ಸ ಶಾಪ್ ನಲ್ಲಿ ಯಾರು ಯಾರು ಕೆಲಸ ಮಾಡುತ್ತಿದ್ದರು ಎಂದು ಈಗ ಹೇಳಲಾರೆ. ನಮ್ಮ ವೈನ್ಸ ಶಾಪ್ ಮೇಲೆ ಬೆಂಕಿ ಬಿದ್ದ ತಕ್ಷಣ ನನಗೆ ಜ್ಞಾನ ಇರಲಿಲ್ಲ. ನಮ್ಮ ವೈನ್ಸ ಶಾಪ್ ಗೆ ಬೆಂಕಿ ಬಿದ್ದ ತಕ್ಷಣ ನನ್ನನ್ನು ಯಾರು ಕಾಪಾಡಿದರು, ಯಾರು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಹೇಳಲು

ಆಗುವುದಿಲ್ಲ. ಯಾವ ಆಸ್ಪತ್ರೆಗೆ ಕರೆದುಕೊಂಡು ಹೋದರು ಮತ್ತು ಸಮಯ ಏನು ಎಂದು ಈಗ ಹೇಸಲು ಆಗುವುದಿಲ್ಲ. ಮಲ್ಲೇಶ ಹಣ ಕೇಳಿದ್ದ ಅದಕ್ಕಾಗಿ ಬಾಂಬ್ ಹಾಕಿದ್ದ ಎಂದು ನಮ್ಮ ಮಾಲೀಕರು ನಮ್ಮಲ್ಲಿ ಹೇಳಿಲ್ಲ. ನಾನು ಚಿಕಿತ್ಸೆ ಪಡೆಯುವಾಗ ಪೊಲೀಸರು ಹೇಳಿಕೆ ದಾಖಲಿಸಿಕೊಂಡ ಬಗ್ಗೆ ಈಗ ಹೇಳಲು ಆಗುವುದಿಲ್ಲ. ಏನೇನು ಬರೆದುಕೊಂಡರು ಎಂದೂ ಕೂಡ ಈಗ ಹೇಳಲು ಆಗುವುದಿಲ್ಲ. ಬೆಂಕಿ ಯಾವ ರೀತಿ ಬಿತ್ತು ಎಂದು ಈಗ ಹೇಳಲು ಆಗುವುದಿಲ್ಲ. ಆಸ್ಪತ್ರೆಯ ಬಿಲ್ಲುಗಳನ್ನು ನನ್ನ ಮಾಲೀಕರು ಭರಿಸಿದ್ದರು. ಆ ಹಣವನ್ನು ಅವರು ಹಿಂತಿರುಗಿ ಕೇಳಿಲ್ಲ. ನಮ್ಮ ವೈನ್ಸ ಶಾಪ್ ಗೆ ಮಧುಗಿರಿ ಪೊಲೀಸ ಠಾಣೆಯವರು ಮದ್ಯ ಖರೀದಿಸಲು ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮಾಲೀಕರು ಮತ್ತು ಪೊಲೀಸರು ಬಹಳ ಅನ್ಯೋನ್ಯತೆಯಿಂದ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಖರ್ಚು ಮಾಡಿದ ಹಣ ಸರ್ಕಾರದಿಂದ ನಮ್ಮ ಮಾಲೀಕರಿಗೆ ಬರುತ್ತದೆ ಎಂದು ನಮ್ಮ ಮಾಲೀಕರು ಹೇಳಿದ್ದರು ಎಂದರೆ ಗೊತ್ತಿಲ್ಲ. ಬಿಲ್ಲುಗಳನ್ನು ನೀಡಿದರೆ ಸರ್ಕಾರದಿಂದ ಹಣ ಬರುತ್ತದೆ ಎಂದು ಪೊಲೀಸರು ಹೇಳಿದ್ದರಿಂದ ಗೊತ್ತು ಎಂದರೆ ಸರಿಯಲ್ಲ. ಕಳೆದ ಬಾರಿ ನನ್ನನ್ನು ಸಾಕ್ಷಿ ಹೇಳಲು ನಾನೇ ಬಂದಿದ್ದು. ನನಗೆ ಪೊಲೀಸರು ಸಾಕ್ಷಿ ನೀಡಬೇಕೆಂದು ಹೇಳಿದ್ದಾರೆ. ಯಾವ ರೀತಿ ಸಾಕ್ಷಿ ಹೇಳಬೇಕೆಂದು ಎಂದು ಪೊಲೀಸರು ಹೇಳಿ ಕೊಟ್ಟಿಲ್ಲ. ನಾನು ಸಾಕ್ಷಿ ಹೇಳಿದರೆ ನಾನು ಖರ್ಚು ಮಾಡಿದ ಹಣ ಸರ್ಕಾರದಿಂದ ಬರುತ್ತದೆ ಎಂದು ಪೊಲೀಸರು ಹೇಳಿದ್ದರಿಂದ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಶ್ರೀ.PNR ವಕೀಲರಿಂದ 3 ನೇ ಆರೋಪಿ ಪರವಾಗಿ:-**

1 ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳಬೇಕಾಗಿ ಕೋರಿಕೊಂಡಿರುತ್ತಾರೆ, ಅಳವಡಿಸಿಕೊಳ್ಳಲಾಯಿತು.

**ಪಾಟೀಸವಾಲು ಶ್ರೀ.RH ವಕೀಲರಿಂದ 4 ನೇ ಆರೋಪಿ ಪರವಾಗಿ:-**

1 ನೇ ಆರೋಪಿ ಪರ ವಕೀಲರ ಪಾಟೀಸವಾಲನ್ನು ಅಳವಡಿಸಿಕೊಳ್ಳಬೇಕಾಗಿ ಕೋರಿಕೊಂಡಿರುತ್ತಾರೆ, ಅಳವಡಿಸಿಕೊಳ್ಳಲಾಯಿತು.

**ಆರೋಪಿ 2 ನೇ ಪರ ವಕೀಲರು ಗೈರು ಹಾಜರಾಗಿದ್ದು ಆರೋಪಿಗಳಿಗೆ ಪಾಟೀಸವಾಲು ಮಾಡಲು ಹೇಳಿದಾಗ ಪಾಟೀಸವಾಲು ಮಾಡಿರುವುದಿಲ್ಲ. ಆದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**